॥ ಹರಿಯ ನೆನೆಯದ ನರಜನ್ಮವೇಕೆ ॥

ಹರಿಯ ನೆನೆಯದ ನರಜನ್ಮವೇಕೆ । ನರ ।
ಹರಿಯ ಕೊಂಡಾಡದ ನಾಲಿಗೆಯೇಕೆ ॥ ಪ ॥

ವೇದವನೋದದ ವಿಪ್ರ ತಾನೇಕೆ ।
ಕಾದಲರಿಯದ ಕ್ಷತ್ರಿಯ ತಾನೇಕೆ ।
ಕ್ರೋಧವ ಬಿಡದ ಸನ್ಯಾಸಿ ತಾನೇಕೆ ।
ಆದರವಿಲ್ಲದ ಅಮೃತಾನ್ನವೇಕೆ ॥ ೧ ॥

ಸತ್ಯಶೌಚವಿಲ್ಲದಾಚಾರವೇಕೆ ।
ನಿತ್ಯ ನೇಮವಿಲ್ಲದ ಜಪತಪವೇಕೆ ।
ಭಕ್ತಿಲಿ ಮಾಡದ ಹರಿಪೂಜೆಯೇಕೆ ।
ಉತ್ತಮರಿಲ್ಲದ ಸಭೆಯು ತಾನೇಕೆ ॥ ೨ ॥

ಮಾತಾಪಿತರ ಪೊರೆಯದ ಮಕ್ಕಳೇಕೆ ।
ಮಾತು ಕೇಳದ ಸೊಸೆಗೊಡವೆ ತಾನೇಕೆ ।
ನೀತಿ ನೇಮವಿಲ್ಲದ ಕೂಟ ತಾನೇಕೆ ।
ಅ । ನಾಥನಾದ ಮೇಲೆ ಕೋಪವದೇಕೆ ॥ ೩ ॥

ಅಳಿದು ಅಳಿದು ಹೋಗುವ ಮಕ್ಕಳೇಕೆ ।
ತಿಳಿದು ಬುದ್ಧಿಯ ಹೇಳದ ಗುರುವೇಕೆ ।
ನಳಿನನಾಭ ಶ್ರೀ ಪುರಂದರ ವಿಠಲನ ।
ಚಲುವ ಮೂರುತಿ ನೋಡದ ಕಂಗಳೇಕೆ ॥ ೪ ॥